**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 486/2025**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಶೋಭಾ

ತಂದೆಯ ಹೆಸರು : ವಾಸು ನಾಯ್ಕ

ವಯಸ್ಸು : 39 ವರ್ಷ

ಉದ್ಯೋಗ : ಟೇಲರಿಂಗ.

ವಾಸ್ತವ್ಯ : ದೇವಿನಗರ,ಜಾಲಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 29/10 /2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

03.11.2024 ರಂದು ಸಂಜೆ 7.00 ಗಂಟೆ ಸುಮಾರಿಗೆ ನಾನು ಅಂಗಡಿ ಹೊರಗಡೆ ನಿಂತಿದ್ದು ಇರುತ್ತದೆ. ಆರೋಪಿಯು ಗಾಡಿಯನ್ನು ತೆಗೆದುಕೊಂಡು ಬಂದು ನನಗೆ ರಂಡೆ ಹೇಗೆ ನಿಂತಿದ್ದಾಳೆ ಎಂದು ನನಗೆ ಅವಾಚ್ಯವಾಗಿ ಬೈಯುತ್ತಾ ಇದ್ದರು. ಆಗ ನಾನು ಆಗಿದ್ದು ಆಗಿ ಹೋಗಿದೆ ಮತ್ತೆ ಯಾಕೆ ನನ್ನ ಸುದ್ದಿಗೆ ಬರುತ್ತಿ ಎಂದು ಕೇಳಿದಾಗ ಆರೋಪಿ 2 ರಿಂದ 6 ಆರೋಪಿತರನ್ನು ಫೋನ್ ಕರೆ ಮಾಡಿ ಕರೆಯಿಸಿರುತ್ತಾನೆ. ಅವರೆಲ್ಲಾ ಸೇರಿ ನಿಂತು ಮಾತನಾಡುತ್ತಿರುವಾಗ ನನ್ನ ಮಗಳು ಚಾಸಾ 5 ಇವಳು ಅಂಗಡಿ ಒಳಗೆ ಮೊಬೈಲಿನಿಂದ ಗೇಮ್ ಆಡುತ್ತಿದ್ದಳು. ಆಗ 2 ನೇ ಆರೋಪಿ ಅಂಗಡಿ ಒಳಗೆ ನುಗ್ಗಿ ನನ್ನ ಮಗಳ ಕೈಯಲ್ಲಿದ್ದ ಮೊಬೈಲನ್ನು ಕಸಿದು ಅವಳ ಎದೆಯ ಮೇಲೆ ಗುದ್ದಿ ನೀನು ವಿಡಿಯೊ್ೕ ಮಾಡುತ್ತಿದ್ದೀಯಾ ಎಂದು ಹೊಡೆದಾಗ ಚಾಸಾ 5 ಅಲ್ಲಿಯೇ ಕುಸಿದು ಬಿದ್ದಿರುತ್ತಾಳೆ. ನಂತರ ಅವಳನ್ನು ನಾನು ಸರಕಾರಿ ಆಸ್ಪತ್ರೆಗೆ ದಾಖಲಿದ್ದು ಅಲ್ಲಿ ಪೊಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ. ಮಾರನೇ ದಿನ 9.00 ಗಂಟೆಗೆ ಠಾಣೆಗೆ ಹೋಗಿರುತ್ತೇನೆ. ನಂತರ ನ್ಯಾಯಾಲಯದ ಅನುಮತಿ ಪಡೆದು ಅದೇ ದಿನ ಸಂಜೆ 7.00 ಗಂಟೆಗೆ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ.ಮರುದಿನ ಪಂಚನಾಮೆಗೆ ಪೊಲೀಸರು ಅಂಗಡಿ ಹತ್ತಿರ ಬಂದಿದ್ದರು. ಪಂಚನಾಮೆಯನ್ನು 12.00 ರಿಂದ 1.00 ಗಂಟೆಯವರೆಗೆ ಮಾಡಿದ್ದರು. 1 ನೇ ಆರೋಪಿಯು ಅಂಗಡಿಯ ಸಾಮಾನುಗಳನ್ನು ಒಡೆದು ಹಾಳು ಮಾಡಿದ್ದು ಇರುತ್ತದೆ. ಆರೋಪಿತರು ಗೈರಾಗಿದ್ದು ಅವರನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

2. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಎನ್ ಸಿ ಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 2 ಎ ಎಂದು

ಗುರುತಿಸಲಾಯಿತು. ಸಾಕ್ಷಿಯು ಹಿಂಬರಹ ನೋಡಿ ಗುರುತಿಸಿದ್ದು ಅದನ್ನು ನಿಪಿ- 3 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಫೊಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ- 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 1 ರಿಂದ 4 ನೇ ಆರೋಪಿ ಪರ ಶ್ರೀ ಆರ್ ಎಸ್ ಎಮ್ ವಕೀಲರಿಂದ,**

ನಾನು ಅಂಗಡಿಯಲ್ಲಿ ಟೇಲರಿಂಗ್ ಕೆಲಸ ಹಾಗೂ ಚಹ ವ್ಯಾಪಾರ ಮಾಡುತ್ತೇನೆ. ಈ ಹಿಂದೆ ನಮ್ಮ ಅಂಗಡಿಯಲ್ಲಿ ಅಕ್ರಮವಾಗಿ ಸರಾಯಿ ಮಾರಾಟ ಮಾಡುತ್ತೇವೆಂದು ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ಪರಿಚಯ ಇಲ್ಲಾ. ನಾನು ಆರೋಪಿಯ ಸ್ನೇಹಿತನ ಮೇಲೆ ಪ್ರಕರಣ ದಾಖಲಿಸಿದ್ದು ಸದರಿ ಪ್ರಕರಣ ವಾಪಸ್ಸು ತೆಗೆದುಕೊಳ್ಳಬೇಕೆಂದು ಆರೋಪಿ ನನಗೆ ಹೇಳುತ್ತಿದ್ದನು. ಆರೋಪಿಯು 10 ನಿ.ದಲ್ಲಿ ತನ್ನ ಮನೆಯವರನ್ನು ಕರೆಯಿಸಿದ ಬಗ್ಗೆ ನಾನು ದೂರಿನಲ್ಲಿ ಬರೆಯಿಸಿಲ್ಲ. ಅರ್ದ ಗಂಟೆ ಕಾಲ ಸದರಿ ಪ್ರಕರಣದ ಘಟನೆ ಆಗಿದೆ. ನನ್ನ ಅಂಗಡಿಯಿಂದ ಸರಕಾರಿ ಆಸ್ಪತ್ರೆಗೆ ಹೋಗಲು ಎಷ್ಟು ಸಮಯ ಬೇಕಾಗುತ್ತದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ಸದರಿ ಘಟನೆ ಬಗ್ಗೆ ರಾತ್ರಿ 8.30 ಗಂಟೆಗೆ ತಿಳಿಸಿರುತ್ತೇನೆ. ಪೊಲೀಸರು ಗುನ್ನಾ ಸ್ಥಳಕ್ಕೆ ಘಟನೆಯ ದಿನದಂದು ಬಂದಿರುವುದಿಲ್ಲ. ಆರೋಪಿತರು ಎಲ್ಲಿಯವರು ಎಂದು ನನಗೆ ಗೊತ್ತಿಲ್ಲ. ಠಾಣೆಗೆ ದೂರನ್ನು ನೀಡಲು ದಿಃ 04.11.2024 ರಂದು ರಾತ್ರಿ 7.30 ರಿಂದ 08.00 ಗಂಟೆ ಸಮಯಕ್ಕೆ ಹೋಗಿರುತ್ತೇನೆ. ಪೊಲೀಸರು ದೂರನ್ನು ಪಡೆದಿರುತ್ತಾರೆ. ಪಂಚನಾಮೆಗೆ ಬಂದ ಪಂಚರು ನನ್ನ ಗಂಡನ ಪರಿಚಯದವರು ಆಗಿದ್ದಾರೆ. ನನ್ನ ಮಗಳನ್ನು ಆಸ್ಪತ್ರೆಗೆ ಘಟನೆಯ ದಿನವೇ ಕರೆದುಕೊಂಡು ಹೋಗಿರುತ್ತೇನೆ. ನಾನು ಹೇಳುವ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ದ್ವೇಷ ಇದ್ದ ಕಾರಣ ಹಾಗೂ ಹಳೇ ಪ್ರಕರಣದ ದ್ವೇಷದ ಕಾರಣ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಘಟನೆಗೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲಾ ಎಂದರೆ ಸರಿಯಲ್ಲ.

**ಪಾಟೀ ಸವಾಲು : 5 ಮತ್ತು 6 ನೇ ಪರ ಆರೋಪಿ ಪರ ವಕೀಲರು 1 ರಿಂದ 4 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**